ಬಂದಿದೆಯೇ?

ಊ) ತೀರ್ಥಹಳ್ಳಿ ಮಿನಿ ವಿಧಾನಸೌಧ ಕೆಲಸ ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 63.

ಆ) 25.

ಇ) 45.00 ಲಕ್ಷ ರೂ.ಗಳು

ಈ) 28.944 ಲಕ್ಷ ರೂ.ಗಳು

ಉ) ಹೌದು.

ಊ) ನೆಲ ಅಂತಸ್ತಿನ ಕಟ್ಟಡ ನಿರ್ಮಾಣವನ್ನು ಸೆಪ್ಟೆಂಬರ್ 98ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ವಿಷಯ: ಅನಧಿಕೃತ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸುವುದು.

1025 (1534)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಭಾಗಗಳಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಸರ್ಕಾರವು ನಿಗಧಿಪಡಿಸಿದ ಕೊನೆಯ ದಿನಾಂಕ ಯಾವುದು?

ಆ) ಬಹುತೇಕ ರೈತರು ಇದಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಅರ್ಜಿಗಳನ್ನು ಕೊನೆಯ ದಿನಾಂಕದೊಳಗೆ ಸಲ್ಲಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಸದರಿ ದಿನಾಂಕವನ್ನು ಮತ್ತೆ ಮುಂದುವರಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 19-09-1991

ಆ) ಹೌದು.

ಇ) ಪರಿಶೀಲಿಸಲಾಗುವುದು.

ವಿಷಯ: ಬಸವಕಲ್ಯಾಣದಲ್ಲಿ ಬಾಬಾ ಸಹೇಬ ವಾರದ್‌ರವರ ಪ್ರತಿಮೆ ಸ್ಥಾಪನೆ.

1026 (1535)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಬಾಬಾ ಸಾಹೇಬ ವಾರದ್‌ರವರ ಕಂಚಿನ ಪ್ರತಿಮೆ ಸ್ಥಾಪಿಸಲು ಸರ್ಕಾರದವರು 10 ಲಕ್ಷ ರೂ.ಗಳನ್ನು ಮಂಜೂರು ಮಾಡುವುದಾಗಿ ಆಶ್ವಾಸನೆ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಮೇಲ್ಕಂಡ ಪ್ರತಿಮೆಯ ಸ್ಥಾಪನೆಗಾಗಿ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಇದರಿ ಹಣವನ್ನು ಮಂಜೂರು ಮಾಡುವುದೇ?

ಶ್ರೀ ಮೀರಾಜುದ್ದೀನ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ಬಸವಕಲ್ಯಾಣದಲ್ಲಿ ಮಿನಿ ವಿಧಾನಸೌಧ ಸ್ಥಾಪನೆ

1027 (1533)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ಬಸವ ಕಲ್ಯಾಣ ಮಿನಿ ವಿಧಾನಸೌಧ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಇಲ್ಲ.

ವಿಷಯ: ನೂತನ ಜಿಲ್ಲೆಯಾದ ಹಾವೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ.